'ಕಾಣಿಸುವ' ನಿರೂಪಣೆಗಳು ಹಳೆಯ ಗ್ರಹಿಕೆಗಳನ್ನು ತೊಡೆದುಕೊಳ್ಳುತ್ತಿವೆ. ಪ್ರಾಯಶಃ ಇದು ಸ್ಥಿತ್ಯಂತರದ ಕಾಲ. 'ಮಲೆಗಳಲ್ಲಿ ಮದುಮಗಳು' ಅನ್ನು ಓದುವ ಬದಲಾಗಿ ನೋಡುವ ಬಗೆಗೆ ಆಸಕ್ತಿ ಬೆಳೆದಿರುವುದು, 'ಕುಸುಮಬಾಲೆ'ಯನ್ನು ಕೇಳುವ ಕಡೆ ಗಮನ ಹರಿದಿರುವುದು ಈ ಪಲ್ಲಟಗಳಿಗೆ ಉದಾಹರಣೆಗಳು. ಹಾಗಾದರೆ ಈ ಹೊತ್ತಿಗೇ ಸಾಹಿತ್ಯ ಮುಗಿದು ಹೋಯಿತು ಎಂದಾಗಲೀ ಅಥವಾ ಅದೇ ಪ್ರಮಾಣ ಎಂದಾಗಲೀ ಹೇಳುವುದು ತಪ್ಪಾಗುತ್ತದೆ. ಆದರೆ ಸಾಹಿತ್ಯದ ರೂಪಗಳು ಸಾಂಪ್ರದಾಯಿಕ ಶೈಲಿಯಲ್ಲಂತೂ ಇಲ್ಲ ಎನ್ನಬಹುದು. ಹೀಗಾಗಿ ಹೊಸ ಸಾಹಿತ್ಯದ ಬೆಳೆ ಹುಲುಸಾಗಿದೆಯಾದರೂ ಸಂಧಿಕಾಲದ ಸಂದಿಗ್ಧಗಳಿಗಿಂದ ಅದರ ಬಗೆಗೆ ಇನ್ನೂ ಮೂಡಬೇಕಾದಷ್ಟು ಆಸ್ಥೆ ಉಂಟಾಗಿಲ್ಲವೆನಿಸುತ್ತದೆ. ಕುವೆಂಪು, ಬೇಂದ್ರೆ, ಕಾರಂತರಂತಹ ಪ್ರತಿಭೆಗಳನ್ನು ಸೃಷ್ಟಿಸಿದ ಯುಗವು ಜುರಾಸಿಕ್ ಯುಗ! ಈಗ ಅಷ್ಟು ಮೇವೂ ಕಾಣೆವು, ನೀರೂ ಕಾಣೆವು. ತೊಂಡು ಮೇಯುವುದಕ್ಕೆ ಜಾಗವೂ ಇಲ್ಲದಂತಾಗಿದೆ!

ಸಮಕಾಲೀನ ಬದುಕನ್ನು ಕಾಣುವ ಲೋಕದೃಷ್ಟಿಯು ಇಂದು ಬದಲಾಗಿದೆ. ನಮ್ಮ ಈ ತಲೆಮಾರು ಅನುಭವಗಳೆಂದು ನೇರಾನುಭವಗಳನ್ನೇ ನೆಚ್ಚಿಕೊಂಡಿಲ್ಲ. ಬದಲಾಗಿ ಅದು ವರ್ಚುಯಲ್ ವಾಸ್ತವಗಳ ಮೂಲಕವೂ ಅನುಭವಗಳನ್ನು ಪಡೆದುಕೊಳ್ಳುತ್ತಿದೆ. ದೇಶವಿದೇಶಗಳ ಅನುಭವಗಳು, ಪ್ರಾದೇಶಿಕತೆಗಳು ಸೃಷ್ಟಿಸುವ ಸಂವೇದನೆಗಳನ್ನು ಸಂಕರಗೊಳಿಸಿ ಸಾಹಿತ್ಯ ಸೃಷ್ಟಿ ನಡೆಯುತ್ತಿದೆ. ಸಮಕಾಲೀನ ಬದುಕನ್ನು ಹಿಡಿದಿಡುವುದಕ್ಕೆ ಹೊಸ ಬರಹಗಾರರು ವಿಫಲರಾಗಿದ್ದಾರೆಯೇ ಎನ್ನುವ ಪ್ರಶ್ನೆ ಆಗಾಗ ಕೇಳಿಬರುತ್ತದೆ. ಆದರೆ ಇದು ಬರಹಗಾರರ ಸಮಸ್ಯೆ ಎನ್ನುವುದಕ್ಕಿಂತ ಯುಗಧರ್ಮದ ಧೋರಣೆಯ ಸಮಸ್ಯೆ ಎನ್ನಬಹುದು. ಇಂದು ಸಾಹಿತ್ಯವು ಸೂಕ್ಷ್ಮ (micro) ವಲಯಗಳ ಸಂಚಾರಿಯಾಗಿದ್ದು ಲಿಂಗತ್ವ, ಜಾತಿ ಹಾಗೂ ಅನೇಕ ಪ್ರತಿನಿಧೀಕರಣಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತಿದೆ. ಸಮಗ್ರ ಬದುಕಿನ ಗ್ರಹಿಕೆಯ ಕ್ರಮ ಇಲ್ಲಿ ಉದ್ದೇಶಪೂರ್ವಕವಾಗಿಯೇ ಹಿನ್ನೆಲೆಗೆ ಸರಿಯುತ್ತದೆ. ಒಂದು ಅಸ್ಮಿತೆಯ ಮೂಲಕ ಲೋಕದ ಅನುಭವಗಳನ್ನು ಗ್ರಹಿಸುವಾಗ ಲೋಕದ ಅನುಭವಗಳೊಂದಿಗೆ ತನ್ನ ಸ್ವ ಅನುಭವವನ್ನು ತುಲನೆ ಮಾಡುತ್ತಾ, ತನ್ನ ಲೋಕ ದೃಷ್ಟಿಯನ್ನು ಮಂಡಿಸುವುದು ಮುಖ್ಯವಾಗುತ್ತದೆ. ಇದು ಒಂದು ರೀತಿ ವರ ಹಾಗೂ ಶಾಪ. ನಮಗೆ ದೂರ ನಿಂತರೆ ಅನುಭವದ ಕ್ಲೋಸ್ ಅಪ್ ಸಿಗುವುದಿಲ್ಲ. ತೀರಾ ಹತ್ತಿರ ಬಂದರೆ ಸಮಗ್ರವಾಗಿ ಕಾಣುವ ದೂರದೃಷ್ಟಿ ಮರೆಯಾಗುತ್ತದೆ. ಇದೇ ವಿಪರ್ಯಾಸ. ಇಂದು ಬರುತ್ತಿರುವ ಸ್ತ್ರೀಸಾಹಿತ್ಯ, ದಲಿತ ಸಾಹಿತ್ಯ, ತೃತೀಯ ಲಿಂಗಿಗಳ ಸಾಹಿತ್ಯಗಳೆಲ್ಲ ನಮಗೆ ಅವುಗಳ ಅನುಭವ ಶೋಧಗಳ ಕಾರಣಗಳಿಂದಲೇ ಮುಖ್ಯವಾಗುತ್ತವೆ. ಒಂದು ಅಸ್ಮಿತೆಯ ಮೂಲಕ ಅನುಭವದ ಶೋಧಕ್ಕೆ ಹೊರಡುವುದು ಎಂದರೆ 'ಒಡೇರ ದಿಬ್ಬ'ದಿಂದ ಕೆಳಗಿಳಿದು ನೋಡವುದು. ಆದರೆ ಅವು ಗೆಟ್ಟೊ ಸಾಹಿತ್ಯಗಳಾಗುವ ಅಪಾಯ ಕೂಡ ಇದ್ದೇ ಇರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಈ ಹೊತ್ತಿನ ಕನ್ನಡ ಸಾಹಿತ್ಯದ ಪರಿಸ್ಥಿತಿಯೂ ಹಾಗೆ ಇದೆ. ದಲಿತ, ಸ್ತ್ರೀ ಸಾಹಿತ್ಯಗಳೆಲ್ಲ ತಮ್ಮ ಅನುಭವದ ಗಂಟುಗಳನ್ನು ಬೇಗ ಕರಗಿಸಿಕೊಂಡು ಬಿಟ್ಟಂತೆ ಕಾಣುತ್ತಿದೆ. ಆಗ ಮತ್ತೊಮ್ಮೆ ಮಗದೊಮ್ಮೆ ನಮ್ಮ ನವೋದಯದ ಲೇಖಕರು ನೆನಪಾಗುತ್ತಾರೆ; ಅವರ ವಿಶ್ವಾತ್ಮಕ ಮೌಲ್ಯಗಳು ಒದಗಿಸಿದ ದೃಷ್ಟಿಕೋನ ಸಾಮಯಿಕ ಎನ್ನಿಸುತ್ತದೆ.



ಆಧುನಿಕ ಸಾಹಿತ್ಯದಲ್ಲಿ ಸಾಹಿತ್ಯ ವಿಶಾಲಗೊಳ್ಳುತ್ತಿರುವಂತೆಯೇ ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯಗಳ ನಡುವಿನ ಮಾರ್ಗವೊಂದು ಸೃಷ್ಟಿಯಾದಂತಿದೆ. ಮಾರ್ಗ ಮತ್ತು ದೇಸಿಗಳ ಮಿಶ್ರಣದಂತಿರುವ ಈ ಅಭಿವ್ಯಕ್ತಿಯನ್ನು ಎರಡರ ನಡುವಿನ ಸಮನ್ವಯದ ಮಾರ್ಗ